**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ; ನ್ಯಾಯಾಲಯ, ಶ್ರೀರಂಗಪಟ್ಟಣ.** PW-3

ಸಾಕ್ಷಿಗೆ ಪ್ರಮಾಣ ವಚನ ಮಾಡಲಾದ ದಿನಾಂಕ 07.03.2025

ಪಾಟೀ ಸವಾಲುಃ ಪ್ರತಿವಾದಿ ಪರ ವಕೀಲರಿಂದಃ

ನಾನು 10 ನೇ ತರಗತಿವರೆಗೂ ಓದಿರುತ್ತೇನೆ. ಹರೀಶ್ ರವರು 10 ನೇ ತರಗತಿವರೆಗೂ ಓದಿರಬಹುದು. ವಾಸುರವರು ಎಲ್ಲಿಯವರೆಗೂ ಓದಿರುತ್ತಾರೆ ಎನ್ನುವ ಪ್ರಶ್ನೆಗೆ ಸಾಕ್ಷಿಯು ಗೊತ್ತಿಲ್ಲ ಎಂದು ನುಡಿಯುತ್ತಾರೆ. ವಾಸುರವರ ತಂದೆಯ ಹೆಸರು ಬೀಸೇಗೌಡ ಇರುತ್ತದೆ.

ಪ್ರನೋಟನ್ನು ವಿಶ್ವನಾಥ್ ಎಂಬುವವರು ಬರೆದಿರುತ್ತಾರೆ. ಪ್ರನೋಟನ್ನು ಹುಲಿಕೆರೆಯಲ್ಲಿರುವ ವಿಶ್ವನಾಥ್ ರವರ ಕಚೇರಿಯಲ್ಲಿ ಬರೆದಿರುತ್ತಾರೆ. ವಿಶ್ವನಾಥ್ ರವರ ಕಚೇರಿಯ ಚೆಕ್ ಬಂದಿ ನನಗೆ ಹೇಳಲು ಆಗುವುದಿಲ್ಲ. ಯಾವ ಉದ್ದೇಶಕ್ಕಾಗಿ ವಾಸುರವರು ಹಣ ಪಡೆದುಕೊಳ್ಳುತ್ತಿದ್ದಾರೆ ಎಂದು ನಿಮ್ಮ ಬಳಿ ಹೇಳಿರುತ್ತಾರೆಯೇ ಎಂಬ ಪ್ರಶ್ನೆಗೆ ಸಾಕ್ಷಿಯು ಇಲ್ಲ ಎಂದು ನುಡಿಯುತ್ತಾರೆ. ಯಾವ ಮುಖ ಬೆಲೆಯ ನೋಟುಗಳನ್ನು ನೀಡಿರುತ್ತಾರೆ ಎನ್ನುವ ಪ್ರಶ್ನೆಗೆ ಸಾಕ್ಷಿಯು 500/- ರೂ ಮುಖ ಬೆಲೆಯ ನೋಟನ್ನು ನೀಡಿರುತ್ತಾರೆ. 500/- ರೂ ನೋಟುಗಳು ಎಷ್ಟು ಇದ್ದವು ಎನ್ನುವ ಪ್ರಶ್ನೆಗೆ ಸಾಕ್ಷಿಯು ನನಗೆ ಸರಿಯಾಗಿ ಲೆಕ್ಕ ಹಾಕಲು ಬರುವುದಿಲ್ಲ ಎಂದು ನುಡಿಯುತ್ತಾರೆ.

ಹರೀಶ್ ರವರು ವಾಸುರವರಿಗೆ ಯಾವುದೇ ಹಣ ನೀಡಿರುವುದಿಲ್ಲ ಎಂದರೆ ಸರಿಯಲ್ಲ. ಹರೀಶ್ ರವರ ಆದಾಯದ ಮೂಲ ನನಗೆ ಗೊತ್ತಿರುವುದಿಲ್ಲ. ಹರೀಶ್ ರವರು ನನಗೆ ಸುಮಾರು 10 ವರ್ಷಗಳಿಂದ ಪರಿಚಯ ಇರುತ್ತಾರೆ. ಪ್ರನೋಟ್ ಬರೆದಾಗ ಸಮಯ ಎಷ್ಟು ಗಂಟೆ ಆಗಿತ್ತು ಎನ್ನುವ ಪ್ರಶ್ನೆಗೆ ಸಾಕ್ಷಿಯು ಸಂಜೆ 7.30 ಗಂಟೆ ಆಗಿತ್ತು ಎಂದು ನುಡಿಯುತ್ತಾರೆ. ಪ್ರನೋಟ್ ಬರೆದಿದ್ದು ಯಾವ ವಾರ ಇತ್ತು ಎನ್ನುವ ಪ್ರಶ್ನೆಗೆ ಸಾಕ್ಷಿಯು ಗೊತ್ತಿಲ್ಲ ಎಂದು ನುಡಿಯುತ್ತಾರೆ.

ಸಾಮಾನ್ಯವಾಗಿ ನೀವೇನಾದರೂ ಸೋಮವಾರ ಶಿವನ ಪೂಜೆ ಮಾಡುವುದು, ಮಂಗಳವಾರ ಲಕ್ಷ್ಮಿ ಪೂಜೆ ಮಾಡುವುದು ಆ ರೀತಿ ಪದ್ಧತಿ ಏನಾದರೂ ಇದೆಯೇ ಎನ್ನುವ ಪ್ರಶ್ನೆಗೆ ಸಾಕ್ಷಿಯು ಇಲ್ಲ ಎಂದು ನುಡಿಯುತ್ತಾರೆ.

ಪ್ರನೋಟ್ ಬರೆದಾಗ ಯಾರು ಯಾರು ಹಾಜರಿದ್ದರು ಎನ್ನುವ ಪ್ರಶ್ನೆಗೆ ಸಾಕ್ಷಿಯು ನಾನು, ವಿಶ್ವನಾಥ್ , ಹರೀಶ್ ಹಾಗೂ ಕೃಷ್ಣ ರವರುಗಳು ಇದ್ದೆವು ಎಂದು ನುಡಿಯುತ್ತಾರೆ. ನೀವು ಆ ದಿನ ಹುಲಿಕೆರೆಗೆ ಏಕೆ ಹೋಗಿದ್ದಿರಿ ಎನ್ನುವ ಪ್ರಶ್ನೆಗೆ ಸಾಕ್ಷಿಯು ಹರೀಶ್ ಮತ್ತು ವಾಸು ಇಬ್ಬರು ಸೇರಿ ನನ್ನನ್ನು ಕರೆದುಕೊಂಡು ಹೋಗಿರುತ್ತಾರೆ ಎಂದು ನುಡಿಯುತ್ತಾರೆ. ಅವರು ಕರೆದಾಗ ನಾನು ಬೆಳಗೋಳ ಗ್ರಾಮದ ಬಸ್ ನಿಲ್ದಾಣದಲ್ಲಿ ಇದ್ದೆನು. ಬೆಳಗೋಳ ಬಸ್ ನಿಲ್ದಾಣದಲ್ಲಿ ಇದ್ದಾಗ ಸಮಯ ಸಂಜೆ 6.30 ರಿಂದ 6.45 ಗಂಟೆ ಆಗಿರಬಹುದು. ಈ ದಿನ ನಿಮ್ಮನ್ನು ಹರೀಶ್ ರವರೇ ಸಾಕ್ಷ್ಯ ಹೇಳಲು ಕರೆದುಕೊಂಡು ಬಂದಿರುತ್ತಾರೆ ಎನ್ನುವ ಪ್ರಶ್ನೆಗೆ ಸಾಕ್ಷಿಯು ಹೌದು ಎಂದು ನುಡಿಯುತ್ತಾರೆ. ನಾನು ಹೇಳಿರುವಂತೆ ಯಾವುದೇ ಹಣದ ವ್ಯವಹಾರ ನಡೆದಿರುವುದಿಲ್ಲ ಎಂದರೆ ಸರಿಯಲ್ಲ. ಹರೀಶ್ ರವರ ಚಿತಾವಣೆ ಮೇರೆಗೆ ನಾವುಗಳು ದಾಖಲೆಗಳನ್ನು ಸೃಷ್ಟಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇವೆ ಎಂದರೆ ಸರಿಯಲ್ಲ.

ಮರುವಿಚಾರಣೆ ಇಲ್ಲ.

ನನ್ನ ಉಕ್ತಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಸಾ.ಓ.ಹೇ.ಸ.ಒ

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆಎಂಎಫ್‌ಸಿ., ಶ್ರೀರಂಗಪಟ್ಟಣ.